# ‘ನರೆಯಂಗಲ್ ಪನ್ನೆರಡು’ ಪ್ರದೇಶ – ಪದ ನಿಷ್ಪತ್ತಿ, ಸ್ಥಳನಾಮ ವಿವೇಚನೆ

**ಸಿದ್ಧಲಿಂಗ ಸಜ್ಜನಶೆಟ್ಟರ***

**DOI: https://doi.org/10.5281/zenodo.21438297**

**ABSTRACT**

ಉತ್ತರ ಕರ್ನಾಟಕದ ಪ್ರಾಚೀನ ಆಡಳಿತ ವಿಭಾಗವಾದ ‘ಬೆಳವಲ–300’ರ ಪ್ರಮುಖ ಉಪವಿಭಾಗವಾಗಿದ್ದ ‘ನರೆಯಂಗಲ್ ಪನ್ನೆರಡು’ (12 ಹಳ್ಳಿಗಳ ಸಮೂಹ) ಪ್ರದೇಶದ ಐತಿಹಾಸಿಕ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಶಾಸನಗಳ ಆಧಾರದ ಮೇಲೆ ಇಲ್ಲಿ ವಿಶ್ಲೇಷಿಸಲಾಗಿದೆ. ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಈ ಆಡಳಿತ ಕೇಂದ್ರದ ಗ್ರಾಮಗಳಾದ ನರೇಗಲ್, ಕೋಟುಮುಚಗಿ, ಅಬ್ಬಿಗೇರಿ, ಜಕ್ಕಲಿ, ಹಾಲಕೇರಿ ಮುಂತಾದವುಗಳ ಸ್ಥಳನಾಮಗಳ ಉಗಮ, ವಿಕಾಸ ಹಾಗೂ ಪದನಿಷ್ಪತ್ತಿಯನ್ನು ವಸ್ತುನಿಷ್ಠವಾಗಿ ಚರ್ಚಿಸಲಾಗಿದೆ. ಕಾಲಾನಂತರದಲ್ಲಿ ಆಯಾ ಗ್ರಾಮಗಳ ಪ್ರಾಚೀನ ಹೆಸರುಗಳು ಇಂದಿನ ರೂಢಿಗತ ಹೆಸರುಗಳಾಗಿ ಹೇಗೆ ಮಾರ್ಪಾಡು ಹೊಂದಿದವು ಎಂಬುದನ್ನು ಭೌಗೋಳಿಕ ಹಾಗೂ ಸಾಮಾಜಿಕ ಹಿನ್ನೆಲೆಯೊಂದಿಗೆ ವಿವರಿಸಲಾಗಿದೆ. ಈ ಮೂಲಕ ಸ್ಥಳನಾಮಗಳ ಅಧ್ಯಯನವು ನಮ್ಮ ಪೂರ್ವಜರ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೇಗೆ ಮರುಸೃಷ್ಟಿಸುತ್ತದೆ ಎಂಬ ಅಂಶವನ್ನು ದೃಢಪಡಿಸಲಾಗಿದೆ.

**KEYWORDS:** ನರೆಯಂಗಲ್ ಪನ್ನೆರಡು, ಸ್ಥಳನಾಮ ವಿವೇಚನೆ, ಪದ ನಿಷ್ಪತ್ತಿ, ಬೆಳವಲ–300, ಶಾಸನಗಳ ಅಧ್ಯಯನ.

* **ಸಿದ್ದಲಿಂಗೇಶ ಉ. ಸಜ್ಜನಶೆಟ್ಟರ,** ಸಂಶೋಧನಾ ವಿದ್ಯಾರ್ಥಿ, ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ, ಜಗದ್ಗುರು ತೋಂಟದಾರ್ಯ ಮಠ, ಗದಗ.

ಜಳನಿಧಿಪರಿವೃತವಸುಧಾತಳ
ದೊಳಭರತೋರ್ವಿಗೆಸೆವ ಕುಂತಳದೇಶಂ
ತಿಳಕಮೆನಿಸಿರ್ದುದೆದೆರೊಳ್
ಫಳಭರಿತಂ ನರೆಯಗಲು ಕರಂ ರಂಜಿಸುಗುಂ ॥

ಬೆಳವಲ-300ರ ಪ್ರದೇಶವು ಕರುನಾಡಿನ ಬಹು ದೊಡ್ಡ ಆಡಳಿತ ಪ್ರದೇಶವಾಗಿದ್ದು, ಮೂನ್ನೂರು ಹಳ್ಳಿಗಳನ್ನು ಒಳಗೊಂಡ ಒಂದು ಪ್ರಾಚೀನ ಪ್ರದೇಶ. ಇದರ ರಾಜಧಾನಿ ಅನ್ಯತಟಾಕ ಅಂದರೆ ಇವತ್ತಿನ ಗದಗ ಹತ್ತಿರವಿರುವ ಅಣ್ಣಿಗೇರಿಯಾಗಿದೆ. ರಾಜರುಗಳು ಈ ಮೂನ್ನೂರು ಹಳ್ಳಿಗಳನ್ನು ಆಡಳಿತದ ಅನುಕೂಲಕ್ಕಾಗಿ ಉಪ ಆಡಳಿತ ಪ್ರದೇಶಗಳನ್ನಾಗಿ ವಿಭಾಗಿಸಿಕೊಂಡು ಕೆಲವು ಹಳ್ಳಿಗಳನ್ನು ಆ ಆಡಳಿತಗಳಲ್ಲಿ ಸೇರಿಸಿಕೊಂಡು ಕೇಂದ್ರಸ್ಥಾನವನ್ನಾಗಿ ಮಾಡಿ ಆಡಳಿತವನ್ನು ನಡೆಸಿರುವುದು ತಿಳಿದುಬರುತ್ತದೆ. ಹಾಗೆ ವಿಭಾಗಿಸಿಕೊಂಡು ರಾಜರು ಆಡಳಿತ ನಡೆಸಿದ ಹನ್ನೆರಡು ಹಳ್ಳಿಗಳ ಕೇಂದ್ರ ಸ್ಥಾನವೇ 'ನರೆಯಂಗಲ್ ಪನ್ನೆರಡು' ಆಗಿದೆ.

ಈ ಪ್ರದೇಶವು ಹನ್ನೆರಡು ಹಳ್ಳಿಗಳನ್ನು ಒಳಗೊಂಡಿದ್ದು, ಈ ಆಡಳಿತ ಪ್ರದೇಶದಲ್ಲಿ ಕಂಡು ಬರುವ ಪ್ರತಿಯೊಂದು ಹಳ್ಳಿಗಳು ತಮ್ಮದೇ ಆದ ಮಹತ್ ಇತಿಹಾಸವನ್ನು ಒಳಗೊಂಡು ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕವಾಗಿ ಕಾಲಕ್ಕನುಗುಣವಾಗಿ ವಿಜೃಂಭಿಸಿದ್ದನ್ನು ನಾವು ಕಾಣಬಹುದು. ಬೇರೆ ಬೇರೆ ಅರಸರ, ಸಾಮಂತರ ಆಡಳಿತ, ದಾನ, ದತ್ತಿ, ದೇವಾಲಯ, ಬಸದಿ, ಮಠಗಳು, ವೀರರ ಬಗೆಗೆ ಈ ಪ್ರದೇಶಗಳಲ್ಲಿ ಸಿಗುವ ಶಾಸನಗಳು ತಿಳಿಯಪಡಿಸುವ ಕೈಗನ್ನಡಿಯಾಗಿ ನಿಂತಿವೆ. ಶಾಸನಗಳನ್ನು ಹಾಗೂ ಹಲವು ಕೃತಿಗಳನ್ನು ಅಧ್ಯಯನ ಕೈಗೊಂಡಾಗ ಅವುಗಳಲ್ಲಿ ಈ ಪ್ರದೇಶದ ಬಗೆಗೆ ವಿಪುಲವಾದ ಮಾಹಿತಿಗಳು ತಿಳಿದು ಬರುತ್ತವೆ. ಈ ಪ್ರದೇಶದ ಕವಿಗಳು, ಖಂಡಣಿಕಾರರು, ಶಾಸನ ಕವಿಗಳು ಅದಲ್ಲದೆ ಜನರು ಬಳಸುವ ಭಾಷೆ, ಸಾಹಿತ್ಯ ಕುರಿತು ತಿಳಿಯಬಹುದು. ಹೀಗೆ ಹಲವಾರು ವಿಷಯಗಳ ಗೂಡಾಗಿ ಕಂಡುಬರುವ ನಾಡೆಂದರೆ ಅದು 'ನರೆಯಂಗಲ್ ಪನ್ನೆರಡು' ಪ್ರದೇಶ.

ನಮ್ಮ ನಾಡಿನ ಪ್ರತಿಯೊಂದು ಗ್ರಾಮ ನಾಮಗಳಿಗೆ ತನ್ನದೇ ಆದ ಇತಿಹಾಸ ಪರಂಪರೆ ಇದೆ. ಪ್ರಾಕೃತಿಕವಾಗಿ ಮನುಷ್ಯ ರೂಢಿಸಿಕೊಂಡ ಆಚಾರ ವಿಚಾರಗಳಿಂದ ಪ್ರತಿ ಗ್ರಾಮನಾಮಗಳಿಗೆ ತನ್ನದೇ ಆದ ವಿಶಿಷ್ಟವಾದ ಹಿನ್ನೆಲೆಯನ್ನು ಗಮನಿಸಬಹುದು. ವ್ಯಕ್ತಿಯೊಬ್ಬನ ಹೆಸರಿನಲ್ಲಿ ಅವನ ವ್ಯಕ್ತಿತ್ವ ಅಡಗಿರುತ್ತದೆ. ಹಾಗೆಯೇ ಸ್ಥಳನಾಮದ ಹಿಂದೆಯೂ ಇದೇ ರೀತಿಯ ವಿಶಿಷ್ಟ ಸಂಬಂಧವಿರುತ್ತದೆ. ಆ ಗ್ರಾಮದ ಐತಿಹಾಸಿಕ ಹೆಸರಿನ ಅರ್ಥದ ಸುರುಳಿ ಬಿಚ್ಚುತ್ತಾ ಹೋದಂತೆ ಅಲ್ಲಿ ನಮ್ಮ ಪೂರ್ವಜರ ಹಾಗೂ ಸಂಸ್ಕೃತಿಗಳ ಲೋಕ ಅನಾವರಣಗೊಳ್ಳುತ್ತದೆ. ಸ್ಥಳನಾಮಗಳಲ್ಲಿ ನಾವು ಶಬ್ದಾರ್ಥಗಳಲ್ಲಿಯ ರೂಪಾಂತರ ಹಾಗೂ ಶಾಬ್ದಿಕ ರೂಪಗಳಲ್ಲಿ ಆಗುವ ಬದಲಾವಣೆ ಇವುಗಳನ್ನು ಅನುಲಕ್ಷಿಸಿ ಸ್ಥಳನಾಮಗಳ ಪದ ನಿಷ್ಪತ್ತಿಯನ್ನು ಕೈಗೊಂಡರೂ ಎಷ್ಟೋ ಸ್ಥಳನಾಮಗಳು ಅರ್ಥ ನಿಷ್ಪತ್ತಿಗೆ ಸಿಗುತ್ತಿಲ್ಲ. ಸ್ಥಳ ನಾಮಗಳನ್ನು ಜನಾಂಗ, ಪ್ರಕೃತಿ (ದಿನ್ನೆ, ದಿಬ್ಬ), ಜಲವಾಚಿ (ಕೆರೆ, ಬಾವಿ), ವ್ಯಕ್ತಿವಾಚಿ, ದ್ರವವಾಚಿ ಹೀಗೆ ವಿಂಗಡಿಸಿಕೊಳ್ಳಲಾಗುತ್ತದೆ. ಭೌಗೋಳಿಕ ಅಂಶಗಳು, ಪ್ರಾಕೃತಿಕ ಅಂಶಗಳು ಸ್ಥಳ ನಾಮಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಗದಗ ಪರಿಸರದ ಕೆಲವು ಭೌಗೋಳಿಕ ಭಾಗಗಳು ಗಡಿನಾಡನ್ನು ಹೊಂದಿಕೊಂಡಂತೆ ಪ್ರಾರಂಭವಾಗುತ್ತದೆ. ಈ ಪ್ರದೇಶವನ್ನು ಬೆಳವಲನಾಡು ಎಂದು ಗುರುತಿಸಲಾಗುತ್ತದೆ. ಬೆಳವಲನಾಡು ಬಯಲು ಸೀಮೆ ಪ್ರದೇಶವಾಗಿದ್ದು, ಇಲ್ಲಿ ಹೈದರಾಬಾದ್ - ಮುಂಬೈ ಕರ್ನಾಟಕ ಈ ಮೂರು ರಾಜ್ಯಗಳನ್ನು ಸಂಧಿಸುವ ಭಾಗವೇ ಈ "ನರೆಯಂಗಲ್ ಪನ್ನೆರಡು"

ಆಗಿದೆ. ಎರೆ ಮಣ್ಣಿನ ಜೊತೆಗೆ ಮಸಾರಿ ಭೂಮಿಯನ್ನು ಒಳಗೊಂಡ ಬಯಲು ಪ್ರದೇಶ ಇದಾಗಿದೆ. ನರೆಯಂಗಲ್ ಪನ್ನೆರಡು ಇದೊಂದು ಪ್ರಾಚೀನ ಆಡಳಿತ ಕೇಂದ್ರವಾಗಿದ್ದು, ಈಗ ನರೇಗಲ್ ಎಂದು ಕರೆಯುತ್ತಾರೆ. ಗದಗದಿಂದ 30 ಕಿ.ಮೀ ಅಂತರದಲ್ಲಿದೆ. ಮೊದಲು ರೋಣ ತಾಲೂಕಿನಲ್ಲಿದ್ದ ಈ ಊರು ಈಗ ಗಜೇಂದ್ರಗಡ ತಾಲೂಕಿನಲ್ಲಿ ಬರುತ್ತದೆ. ನರೇಗಲ್ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ 12 ಗ್ರಾಮಗಳ ಆಡಳಿತ ಕೇಂದ್ರವಾಗಿತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಕ್ರಿ. ಶ. 1112ರ ಇಟಗಿ ಶಾಸನದಲ್ಲಿ ಪ್ರಥಮವಾಗಿ 'ನರೆಯಂಗಲ್ಪನ್ನೆರಡು' ಎಂಬ ಉಲ್ಲೇಖ ಕಂಡುಬರುತ್ತದೆ.

**ನರೆಯಂಗಲ್ಪನ್ನೆರಡುಂ ಧರಾಂಗನಾ**
**ತಿಳಕಮೆನಿಸಿ ಬೆಳವೊಲ ನಾಡೊಳು**
**ಕರಮೊಪ್ಪಿ ತೋರ್ಕ್ಕುಮವರೊಳ್‌ದೊರೆವೆತ್ತ**
**ಮಹಾಗ್ರಹಾರವಿಟ್ಟಗೆಯೆಸೆಗುಂ**

**(ಕೊಪ್ಪಳ ಜಿಲ್ಲಾ ಶಾಸನ ಸಂಪುಟ-ಎರಡು 67-ಇಟಗಿ-ಪು-263 ಕ್ರಿ.ಶ.1112)**

ಕುಂತಲ ದೇಶದ ಆಡಳಿತ ವಿಭಾಗಗಳಲ್ಲಿ ಬೆಳವೊಲ-300 ಪ್ರಮುಖವಾದ ಆಡಳಿತ ಪ್ರದೇಶದ ಭಾಗವಾಗಿದ್ದು 300 ಹಳ್ಳಿಗಳನ್ನು ಒಳಗೊಂಡಿದ್ದಾಗಿದೆ. ಈ ಭಾಗವನ್ನು ಆಡಳಿತದ ಅನುಕೂಲಕ್ಕಾಗಿ ಉಪಾಡಳಿತಗಳನ್ನಾಗಿ ವಿಭಾಗಿಸಿಕೊಳ್ಳಲಾಗಿತ್ತು. ಗದಗ ಶಾಸನದಲ್ಲಿ 'ವನಧಿಪರೀತಭೂತದೊಳೊಪ್ಪುವ ಬೆಳವಲದೇಶಮೆಂಬ ಕಾಮಿನಿಯ ಘನೋನ್ನತಸ್ತನಮನೋಹರ' ಅಂದರೆ ಸಮುದ್ರದಿಂದ ಸುತ್ತುವರೆದ ಭೂಮಿಯಲ್ಲಿ ಬೆಳವೊಲ ದೇಶವೆಂಬ ಕಾಮಿನಿಯ ಎಂಬ ಉಲ್ಲೇಖವಿದೆ. ಇದು ಫಲವತ್ತಾದ ಪ್ರದೇಶವಾಗಿದ್ದು ಸುಖ ಸಮೃದ್ಧಿಯ ನಾಡಾಗಿತ್ತೆಂದು ತಿಳಿದುಬರುತ್ತದೆ. ಇಂತಹ ಮನೋಹರವಾದ ಬೆಳವೊಲ ನಾಡಿನಲ್ಲಿ ಅಗ್ರಹಾರವಾಗಿ ಪ್ರಮುಖ ಆಡಳಿತ ಕೇಂದ್ರವಾಗಿ ನರೆಯಂಗಲ್ ಪನ್ನೆರಡು ಇತ್ತು.

ಬೆಳವೊಲ ಪ್ರದೇಶದ ಶಾಸನಗಳಲ್ಲಿ ನರೆಯಂಗಲ್ ಪನ್ನೆರಡು ಎಂದು ದಾಖಲಾಗುತ್ತಾ ಬಂದಿದೆ. ಇದರ ಭೌಗೋಳಿಕ ವ್ಯಾಪ್ತಿ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಕೆಲವು ಹಳ್ಳಿಗಳು, ಗದಗ ಜಿಲ್ಲೆಯ ರೋಣ ತಾಲೂಕಿನ ಹಲವಾರು ಹಳ್ಳಿಗಳನ್ನು ಒಳಗೊಂಡಿದ್ದು ಅಲ್ಲಿಯ ಶಾಸನಗಳಲ್ಲಿ ಹೆಚ್ಚಿನ ರೂಪ ಮತ್ತು ಉಚ್ಚಾರಣೆಯಲ್ಲಿ ಸ್ವಲ್ಪ ವ್ಯತ್ಯಾಸ ಇರುವುದನ್ನು ಕಾಣಬಹುದು. ಈ ಪ್ರದೇಶಗಳಲ್ಲಿ ಸಿಗುವ ಬೇರೆ ಬೇರೆ ಶಾಸನಗಳಲ್ಲಿ ನರೇಗಲ್ ಹೆಸರಿನ ಉಲ್ಲೇಖ ಈ ರೀತಿಯಾಗಿ ಕಂಡುಬರುತ್ತದೆ:

- ನರೆಯಂಗಲ್ಲು (ಕಲ್ಲೂರು ಶಾಸನ)
- ನರೆಯಂಗಲು (ನರೇಗಲ್ ಶಾಸನ)
- ನರೆಯಂಗಲ್ (ಕೋಡಿಕೊಪ್ಪ ಶಾಸನ)
- ನರೆಯಂಗಲ್ಲ (ನರೇಗಲ್ ಶಾಸನ)
- ನರೆಯಗಲ (ಕೋಟುಮುಚಗಿ ಶಾಸನ)
- ಕಿರುನರೆಯಂಗಲ್ಲ (ಕೋಡಿಕೊಪ್ಪ ಶಾಸನ)
- ಕಿನ್ನರಿಗಲ್ಲ (ನರೇಗಲ್ ಶಾಸನ)
- ಕಿರುನರೆಯಂಗಲ್ - ಹಿರಿಯ ನರೆಯಂಗಲ್ (ಕೋಡಿಕೊಪ್ಪ ಶಾಸನ)
- ನರೆಯಂಗಲ್ಲೆರಡುಂ (ನರೇಗಲ್ ಶಾಸನ)

- ನರೆಯಂಗಲ್ ಪುರ (ನರೇಗಲ್ ಶಾಸನ)
- ನರೆಯಗಲು (ನರೇಗಲ್ ಶಾಸನ)
- ಕಿಂ ನರಿಗಲ್ಲ (ನರೇಗಲ್ ಶಾಸನ)

ಹೀಗೆ ಈ ಆಡಳಿತ ಪ್ರದೇಶಗಳಲ್ಲಿ ಸಿಗುವ ಶಾಸನಗಳಲ್ಲಿ ನರೆಯಂಗಲ್ ಪದವು ಉಲ್ಲೇಖವಾಗಿರುವುದನ್ನು ಕಾಣಬಹುದು. ಕೋಡಿಕೊಪ್ಪ ಮತ್ತು ನರೇಗಲ್ ಪ್ರದೇಶಗಳ ಶಾಸನಗಳಲ್ಲಿ ನರೇಗಲ್ ಎರಡು ಹೆಸರಿನಿಂದ ಆಡಳಿತ ನಿರ್ವಹಿಸುವುದು ತಿಳಿದು ಬರುತ್ತದೆ. ನರೇಗಲ್ ದ ಕ್ರಿ.ಶ. 1104–05ರ ಶಾಸನದಲ್ಲಿ ನರೆಯಂಗಲ್ಲೆರಡುಂ ಎಂಬ ಉಲ್ಲೇಖವಿದೆ. ಊರಿನ ಮತ್ತೊಂದು ಶಾಸನದಲ್ಲಿ ಕಿನ್ನರಿಗಲ್ಲು ಎಂಬ ಉಲ್ಲೇಖವಿರುವುದನ್ನು ನೋಡಿದಾಗ ನರೇಗಲ್ ಎರಡಿರುವುದು ಸ್ಪಷ್ಟವಾಗುತ್ತದೆ. ಕೋಡಿಕೊಪ್ಪದ ಕ್ರಿ.ಶ. 1121ರ ಮತ್ತು ಕ್ರಿ.ಶ. 1114ರ ಶಾಸನದಲ್ಲಿ ಕಿರುನರೆಯಂಗಲ್, ಹಿರಿಯ ನರೆಯಂಗಲ್ ಎಂಬ ಉಲ್ಲೇಖವಿದೆ. ಆದರೆ ಇವತ್ತು ನರೇಗಲ್ ಎಂಬ ಪ್ರದೇಶವು ಒಂದೇ ಈ ಭಾಗದಲ್ಲಿದ್ದು, ಕಿರಿ ನರೇಗಲ್ ನಮಗೆ ಕಾಣಸಿಗುವುದಿಲ್ಲ. ಆದರೆ ವಿದ್ವಾಂಸರನ್ನು, ಸ್ಥಳೀಯರನ್ನು ಭೇಟಿ ಮಾಡಿ ಸಂದರ್ಶಿಸಿದಾಗ ಕೋಡಿಕೊಪ್ಪವೇ ಅವತ್ತಿನ ಕಿರಿಯ ನರೆಯಂಗಲ್ ಆಗಿತ್ತು ಎಂದು ಹೇಳುತ್ತಾರೆ. ಈ ಕುರಿತು ಶಾಸನಗಳನ್ನು ನೋಡಿ ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

**ನರೇಗಲ್ ಪದ ನಿಷ್ಪತ್ತಿ:**

ನೆರೆಯ – ಪಕ್ಕದ, ಗಲ್ಲು – ಕಲ್ಲಿನ, ನೆರೆ + ಕಲ್ಲು > ನೆರೆಗಲ್ಲು > ನರೆಗಲ್ಲು (ನೆರೆಯ ಕಲ್ಲು ).

ನೆರೆ ಅಂದರೆ ಪಕ್ಕದ ಕಲ್ಲಿನ ಪ್ರದೇಶ. ನೆರೆಕಲ್ಲು ಕಾಲಾಂತರದಲ್ಲಿ ನೆರೆಗಲ್ಲು > ನರೆಗಲ್ಲು ಆಗಿದೆ.

ನರೇಗಲ್ಲ ಪ್ರದೇಶದ ಸ್ಥಳೀಯ ಇತಿಹಾಸಕಾರರನ್ನು ಸಂದರ್ಶಿಸಿದಾಗ ಅವರು ಹೇಳಿದ್ದು ಈ ರೀತಿಯಾಗಿತ್ತು: ನರೇಗಲ್ ಪ್ರದೇಶವು ಗಡಿಭಾಗದಲ್ಲಿರುವದರಿಂದ ಯುದ್ಧಗಳ ಸಂದರ್ಭದಲ್ಲಿ ನೆರೆ ಪ್ರದೇಶವೆಂಬ ಕಲ್ಲುಗಳನ್ನು ಹಾಕುತ್ತಿದ್ದರು. ಹೀಗಾಗಿ ನೆರೆಯ ಗಲ್ಲು > ನೆರೆಕಲ್ಲು > ನರೆಯಕಲ್ಲು > ನರೇಗಲ್ಲು ಆಗಿದೆ ಎಂದು ತಿಳಿಸುತ್ತಾರೆ.

ಸತಿಸಹಗಮನದ ನಂತರ ಸಹಗಮನ ಹೊಂದಿದ ನಾರಿಯರ ನೆನಪಿಗಾಗಿ ನಾರಿಯರ ಕಲ್ಲುಗಳನ್ನು ಪುರದೊಳಗೆ ನಿಲ್ಲಿಸುತ್ತಿದ್ದರು. ಹೀಗಾಗಿ ಆ ಹೆಸರೇ ಮುಂದೆ ನಾರಿಯರಕಲ್ಲು > ನಾರಿಯಕಲ್ಲು > ನರೆಯಕಲ್ಲು > ನರೆಯಗಲ್ಲು > ನರೇಗಲ್ಲು ಆಗಿದೆ ಎಂದು ಹೇಳುತ್ತಾರೆ. ಈ ಹೇಳಿಕೆಯನ್ನು ಗಮನಿಸಿದಾಗ ನರೇಗಲ್ ದಲ್ಲಿ ಯಾವುದೇ ರೀತಿಯ ಕಲ್ಲುಗಳು ನಮಗೆ ಸಿಗುವುದಿಲ್ಲ. ಹೀಗಾಗಿ, ಒಂದನೆಯ ಹೇಳಿಕೆಯು ಸರಿ ಎಂದು ಅನಿಸುತ್ತದೆ. ಆದರೆ ನಿಖರವಾಗಿ ನಾವು ಶಾಸನಗಳನ್ನು ಅನುಲಕ್ಷಿಸಿ ನೋಡಿದಾಗ ಕ್ರಿ.ಶ. 1114 ರಲ್ಲಿ ನರೆಯಂಗಲು, ಕ್ರಿ.ಶ 1121 ರಲ್ಲಿ ನರೆಯಂಗಲ್ಲು, 1125 ರಲ್ಲಿ ನರೆಯಂಗಲ್, ಮುಂದೆ ಕಾಲಾಂತರದಲ್ಲಿ ನರೆಯಂಗಲ್ಲ > ಬಿಂದು ಲೋಪವಾಗಿ ನರೆಯಗಲ್ಲ > ನರೆಗಲ್ಲ > ಇವತ್ತು ನರೇಗಲ್ ಎಂದು ಆಗಿದೆ.

**ಕೋಟುಮಚಗಿ:**

ಉಮ್ಮತ್ತಿಗೆ > ಕೋಂಟೆ ಉಮ್ಮಚ್ಚಿಗೆ > ಸದಾಶಿವರಾಯಸಮುದ್ರ > ಕೋಟುಮಚ್ಚಿಗೆ > ಕೋಟುಮಚಗಿಯಾಗಿ ನಿಷ್ಪನ್ನವಾಗಿರುವುದು ತಿಳಿದುಬರುತ್ತದೆ. ಕ್ರಿ.ಶ. 1112ರ ಮುಮ್ಮಡಿ

ಸೋಮೇಶ್ವರನ ಕಾಲದ ಶಾಸನದಲ್ಲಿ 'ಉಮ್ಮಚಗಿ' ಎಂದು ಉಲ್ಲೇಖವಿದೆ. ಕ್ರಿ.ಶ. 16ನೇ ಶತಮಾನದ ರಾಷ್ಟ್ರಕೂಟ ಅರಸರ ಕಾಲದ ಜೈನ ಬಸದಿಯಲ್ಲಿರುವ ದೇವನಾಗರಿ ಲಿಪಿಯ ಶಾಸನದಲ್ಲಿ ಉಮ್ಮಚಿಗಿ ಗ್ರಾಮಕ್ಕೆ 'ಸದಾಶಿವರಾಯ ಸಮುದ್ರ' ಎಂದು ಉಲ್ಲೇಖಗೊಂಡಿದೆ. ವಿಜಯನಗರದ ಅರಸ ಸದಾಶಿವರಾಯನು ಈ ಭಾಗವನ್ನು ಆಳುತ್ತಿದ್ದಾಗ ಅವನು ಕಟ್ಟಿಸಿದ ಕೆರೆಯ ಹೆಸರು ಬಂದಿರಬಹುದು. ಈ ಪ್ರದೇಶದಲ್ಲಿ ಕೋಟೆ ಇದ್ದು, ಜೈನರಿದ್ದ ಕಾರಣ ಉಮ್ಮಚಿಗೆರೆ, ಕೋಟೆ ಉಮ್ಮಚಗಿ ಹೀಗೆ 'ಕೋಟುಮುಚಗಿ' ಆಗಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ.

**ಅಬ್ಬಿಗೇರಿ:**

ಅಬ್ಬಿ – ತಾಯಿ, ಗೆರೆ – ಕೆರೆ ಅಬ್ಬೆ, ಅಬ್ಬಿ ಇದು ಸ್ತ್ರೀ ವಾಚಿ ಸ್ಥಳನಾಮವಾಗಿದೆ ಮತ್ತು ಶಾಸನೋಕ್ತ ಸ್ಥಳನಾಮವಾಗಿದೆ. ಕ್ರಿ.ಶ. 1125ರ ಶಾಸನದಲ್ಲಿ "ನರೆಯಂಗಲು ಹನ್ನೆರಡರ ಬಳಿಯ ಬಾಡವಬ್ಬಯಗೆರೆಯ ಅಬ್ಬಿಯಗೆರೆ" ಎಂದು ಉಲ್ಲೇಖಿತವಾಗಿದೆ. ಕ್ರಿ. ಶ. 1186 ರಲ್ಲಿ ಅಬ್ಬೆಯಗೆರಿ, 1379 ರಲ್ಲಿ ಅವ್ವಗೇರಿ ಎಂಬ ಉಲ್ಲೇಖಗಳಿವೆ. ಅಬ್ಬೆ – ತಾಯಿ ಅಥವಾ ಅವ್ವ ಕಟ್ಟಿಸಿದ ಕೆರೆ ಅಥವಾ ತಾಯಿಯ ಸ್ಮರಣಾರ್ಥವಾಗಿ ಕಟ್ಟಿಸಿದ ಕೆರೆಯಿಂದ ಈ ಹೆಸರು ಬಂದಿದೆ. ಈಗ ಈ ಊರಿಗೆ 'ಅಬ್ಬಿಗೇರಿ' ಎಂದು ಕರೆಯುತ್ತಾರೆ. ಇಲ್ಲಿಯ ಪುರಾತನ ಕೆರೆ ನಮಗೆ ಇಂದಿಗೂ ನೋಡಲು ಸಿಗುತ್ತದೆ. ಈಗಿರುವ ಕೆರೆಯಿಂದಲೇ ಈ ಹೆಸರು ಬಂದಿದೆ. ಉದಾ: ಅನ್ಯತಟಾಕ ಈ ಬೆಳವಲ–300ರ ಪ್ರದೇಶದ ರಾಜಧಾನಿಯಾಗಿತ್ತು, ಇವತ್ತಿನ ಅಣ್ಣಿಗೇರಿಯೇ ಅನ್ಯತಟಾಕ. ಅಂದರೆ ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವ ತಟಾಕವನ್ನು ಅಂದರೆ ಕೆರೆಯನ್ನು ನಿರ್ಮಿಸುತ್ತಾನೆ. ಹೀಗಾಗಿ ಅವನ ಸ್ಮರಣಾರ್ಥ ಈ ಹೆಸರನ್ನು ಕರೆದುದ್ದನ್ನು ಕಾಣಬಹುದು. ಹಾಗೆಯೇ ಈ ಅಬ್ಬಿಗೇರಿ ಗ್ರಾಮದ ಸ್ಥಳನಾಮವಾಗಿದೆ.

**ಜಕ್ಕಲಿ:**

ಇವತ್ತು ರೋಣ ತಾಲೂಕಿನಲ್ಲಿ ಬರುವ ಜಕ್ಕಲಿ ಗ್ರಾಮವು ನರೆಯಂಗಲ್ ಪನ್ನೆರಡರ ಒಂದು ಪ್ರಮುಖ ಅಗ್ರಹಾರವಾಗಿದ್ದಿತು. ಜಕ್ಕಲಿ ಗ್ರಾಮವು ಪ್ರಾಚೀನ ಇತಿಹಾಸವನ್ನು ಒಳಗೊಂಡಿದ್ದು, ಈ ಪ್ರದೇಶವನ್ನು ಹಲವಾರು ಅರಸು ಮನೆತನದವರು ಆಳಿರುವುದು ಶಾಸನಗಳಿಂದ ತಿಳಿದುಬರುತ್ತದೆ. 6ನೇ ವಿಕ್ರಮಾದಿತ್ಯನ ಕ್ರಿ.ಶ. 1120ರ ಶಾಸನದಲ್ಲಿ "ಶ್ರೀಮದಗ್ರಹಾರಂ ಜಕ್ಕಿಲಿಯೊರೊಡೆಯ". ಶಾಸನದಲ್ಲಿ ಈ ಗ್ರಾಮಕ್ಕೆ 'ಜಕ್ಕಿಲಿ' ಎಂದು ಉಲ್ಲೇಖವಾಗಿರುವುದು ತಿಳಿದುಬರುತ್ತದೆ. ಸ್ಥಳೀಯ ವಿದ್ವಾಂಸರನ್ನು ಸಂದರ್ಶಿಸಿದಾಗ ಜಕ್ಕಿ ಅಂದರೆ ಯಕ್ಷ ಅಥವಾ ಯಕ್ಷಿಣಿ ಎಂದರ್ಥವಾಗುತ್ತದೆ, ಬಲಿಷ್ಠವಾದ ಯಕ್ಷನು ವಾಸವಾಗಿದ್ದು ಆ ಯಕ್ಷಿಯೇ ಮುಂದೆ ಯಕ್ಷೀ > ಜಕ್ಕಿ > ಜಕ್ಕ > ಜಕ್ಕಿಲಿ > ಜಕ್ಕಲಿ ಆಯಿತು ಎಂದು ಹೇಳಿದರು. ಜಕ್ಕಲಿ ಗ್ರಾಮನಾಮವು ಶಾಸನದಿಂದ ಹಿಡಿದು ಇಲ್ಲಿಯವರೆಗೆ ಯಾವುದೇ ಬದಲಾವಣೆಯನ್ನು ಕಾಣದೆ ಹಾಗೆಯೇ ಉಳಿದುಕೊಂಡು ಬಂದಿದೆ.

**ಹಾಲಕೇರಿ:**

ನರೆಯಂಗಲ್ ಪನ್ನೆರಡರಲ್ಲಿ ಬರುವ ಹಾಲಕೇರಿ ಗ್ರಾಮದ ಪದ ರೂಪನಿಷ್ಪತ್ತಿಯನ್ನು ನೋಡುವುದಾದರೆ, ಹಾಲಕೇರಿಯು – ಹಾಲು + ಕೇರಿ = ಹಾಲುಕೇರೆ, ಹಾಳಕೇರಿ > ಹಾಲಕೇರಿಯಾಗಿದೆ. ಹಾಳಕೇರಿ ಅಂದರೆ, ಹಳೆಯದಾದದ್ದು – ಅತೀ ಪ್ರಾಚೀನವಾದದ್ದು ಎಂದು ಅರ್ಥ. 'ಕೇರಿ' ಎಂಬ ಪದದ ಅರ್ಥ ಊರು ಅಥವಾ ಓಣಿ ಎಂಬ ಅರ್ಥವನ್ನು ಸೂಚಿಸುತ್ತದೆ. ಹಾಲಕೇರಿ ಎಂಬುದು ಜಲವಾಚಿ, ನಿಸರ್ಗವಾಚಿ ಎಂಬರ್ಥವನ್ನು

ಸೂಚಿಸುತ್ತದೆ. ಹಾಲಕೇರೆಯಿಂದ ಸು. 09 ಕಿ.ಮೀ. ಅಂತರದಲ್ಲಿರುವ ಯಲಬುರ್ಗಾ ತಾಲೂಕಿನ ಮುಧೋಳದ ಕ್ರಿ.ಶ. 1154ರ ಶಾಸನದಲ್ಲಿ "ಶ್ರೀ ಹಾಗಲಕೇರಿಯಯಿನ್ನುರ್ವ್ವರ ದೇಗುಲದ ಮಗತಿ... ಯಲು ಸರ್ವ ನಮಸ್ಯವಾಗಿ ದೇವರ್ಗೆ ಬಿಟ್ಟ ಮನೆ ಎರಡು" ಎಂದು ಶಾಸನದಲ್ಲಿ ಉಲ್ಲೇಖ ಇರುವುದನ್ನು ನೋಡಿದರೆ ಅವತ್ತಿನ ಹಾಗಲಕೇರಿಯೇ ಇವತ್ತಿನ ಹಾಲಕೇರಿ ಎಂದು ಹೇಳಬಹುದು. ನಿಡಗುಂದಿಯ ಕ್ರಿ.ಶ. 1174ರ ಶಾಸನದಲ್ಲಿ ಹಾಳಕೇರಿ ಎಂಬ ಉಲ್ಲೇಖವಿದೆ. ಹಾಳಕೇರಿ > ಹಾಲಕೇರಿ ಆಗಿದೆ.

**ಕೋಡಿಕೊಪ್ಪ:**

ನರೇಗಲ್ ನಗರಕ್ಕೆ ಹೊಂದಿಕೊಂಡಿರುವ ಇವತ್ತಿನ ಕೋಡಿಕೊಪ್ಪದಲ್ಲಿ ಒಟ್ಟು ಮೂರು ಶಾಸನಗಳು ಸಿಗುತ್ತವೆ. ಆದರೆ ಯಾವ ಶಾಸನದಲ್ಲಿಯೂ ಕೋಡಿಕೊಪ್ಪ ಗ್ರಾಮದ ಉಲ್ಲೇಖ ಕಂಡು ಬರುವುದಿಲ್ಲ. ಆದರೆ ಕ್ರಿ.ಶ. 1121ರ ಶಾಸನದಲ್ಲಿ ಕಿರು ನರೆಯಂಗಲ್ ಮತ್ತು ಹಿರಿಯ ನರೆಯಂಗಲ್ ದ ಪ್ರಸ್ತಾಪ ಬರುತ್ತದೆ. ಕ್ರಿ.ಶ 1144ರ ಅದೇ ಊರಿನ ಶಾಸನದಲ್ಲಿ 2ನೆಯ ಜಗದೇಕಮಲ್ಲನು ನರೆಯಂಗಲ್ಲು ಪನ್ನೆರಡು ಆಳುತ್ತಿದ್ದನು.

"ಕಿರುನರೆಯಂಗಲ್ಲ ಶ್ರೀ ಮೂಲಸ್ಥಾನ ಬ್ರಹ್ಮೇಶ್ವರದೇವರಂಗಭೋಗಕ್ಕೆ ತಂಬುಲಿಗ ಸಾಸಿರ್ವರುಂ ಶೇಷಮರ್ದ್ದಂ ಕಿರುನರೆಯಂಗಲ್ಲ ಕೊಯ್‌ದೆಲೆಯ ಹೇರಿಂಗೆ ವೀಸವೊಂದುತ್ತರದರ್ಗೆ... ನಂದಾದೀವಿಗೆಗೆ ಸರ್ವ್ವನಮಸ್ಯವಾಗಿ ಬಿಟ್ಟ ಗಾಣವೊಂದು. ॥ ಬ್ರಹ್ಮೇಶ್ವರದೇವರ್ಗ್ಗುಂ ಉಗುರಮೂನೂರ್ವರುಂ ಮೆಲೆಯಬೋಜಂಗರ... ಪ್ರತ್ಯೇಕ ವೊಕ್ಕಲಲೊಂದು ಪಣಮಂ ದೇವರಂಗಭೋಗಕ್ಕೆ ಬಿಟ್ಟರು"

ಬ್ರಹ್ಮದೇವರಿಗೆ ತೆಲ್ಲಿಗರು ದೇವರ ನಂದಾದೀವಿಗಿಗೆ ಒಂದು ಗಾಣವನ್ನು ಹಾಗೂ ಸಾವಿರ ತಂಬುಲಿಗ, ಉಗುರ ಮುನ್ನೊರರು ದಾನಗಳನ್ನು ಬಿಟ್ಟಿರುವ ಬಗೆಗೆ ತಿಳಿಸಿಕೊಡುತ್ತದೆ. ಈ ಶಾಸನದಲ್ಲಿ ಕಿರುನರೆಯಂಗಲ್ಲ ಎಂಬ ಉಲ್ಲೇಖ ಬರುತ್ತದೆ. ಈ ಎಲ್ಲಾ ಶಾಸನಗಳನ್ನು ಮತ್ತು ಹಿರಿಯರ ಸಂದರ್ಶನ ಮುಖಾಂತರ ತಿಳಿದು ಬರುವುದೇನೆಂದರೆ ಶಾಸನದಲ್ಲಿ ಉಲ್ಲೇಖಿತವಾದ ಕಿರಿನರೆಗಲ್ಲೇ ಇವತ್ತಿನ ಕೋಡಿಕೊಪ್ಪವಾಗಿದೆ ಎಂದು. ನರೇಗಲ್ಲದ ಕ್ರಿ.ಶ. 1105ರ ಶಾಸನದಲ್ಲಿ ನರೆಯಂಗೆಲ್ಲೆರಡುಂ ಎಂಬುದು ನರೇಗಲ್ ಎರಡಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ನರೇಗಲ್ಲದಲ್ಲಿರುವ ಹಿರಿಯಕೇರಿಯ ನೀರು ಕೋಡಿಯ ಮುಖಾಂತರ ನೀರು ಬೀಳುತ್ತಿತ್ತು ಹೀಗಾಗಿ ಇದಕ್ಕೆ ಕೋಡಿಕೊಪ್ಪ ಅಂತ ಬಂದಿದೆ. ಈಗಲೂ ಹಿರಿಯಕೇರಿಯ ನೀರು ಕೋಡಿಯ ಮುಖಾಂತರ ನೀರು ಬೀಳುವುದನ್ನು ಕಾಣಬಹುದು. ಹಲವಾರು ವಿದ್ವಾಂಸರು ಇದನ್ನು ತಮ್ಮ ಕೃತಿಗಳಲ್ಲಿ ಉಲ್ಲೇಖಿಸುತ್ತಾರೆ. ಒಟ್ಟಾರೆ ಕಿರು ನರೆಯಂಗಲ್ಲೇ ಇವತ್ತಿನ ಕೋಡಿಕೊಪ್ಪವಾಗಿದೆ ಎಂದು ಹೇಳಬಹುದು.

**ತೋಟಗಂಟಿ (ಎಲೆಯಪೂರ್ವಹಳ್ಳಿ ):**

ನರೆಯಂಗಲ್ ಹನ್ನೆರಡರಲ್ಲಿ ಬರುವ ತೋಟಗಂಟಿ ಗ್ರಾಮವು ಇವತ್ತು ಈ ಪ್ರದೇಶದಲ್ಲಿನ ಒಂದು ಸಣ್ಣ ಹಳ್ಳಿಯಾಗಿದ್ದು ಯಾವುದೇ ಶಾಸನಗಳು ಈ ಊರಲ್ಲಿ ಲಭ್ಯವಾಗುವುದಿಲ್ಲ. ಆದರೆ ಪುರಾತನ ರಾಮೇಶ್ವರ ಗುಡಿಯು ಈ ಊರಿನಲ್ಲಿದೆ. ಆದರೆ ಈ ಊರಿಗೆ ಶಾಸನದಲ್ಲಿ ಎಲೆಯಪೂರ್ವಹಳ್ಳಿಯೆಂದು ಕರೆಯಲಾಗಿದೆ. ಅಬ್ಬಿಗೇರಿಯ ಶಾಸನದಲ್ಲಿ 'ಅಗ್ರಹಾರ ಎಲೆಪೂರ್ವಹಳ್ಳಿ' ಎಂಬ ಉಲ್ಲೇಖವಿದೆ. ಈ ಪ್ರದೇಶದಲ್ಲಿ ಎಲೆ–ಬಳ್ಳಿಯ ತೋಟಗಳು ಹೇರಳವಾಗಿದ್ದವು. ಎಲೆ ಅಂದರೆ ಹಾಕಿಕೊಳ್ಳುವ ಎಲೆ, ಪೂರ್ವ ಅಂದರೆ ದಿಕ್ಕು ಅದೇ ಪರ್ಯಾಯವಾಗಿ ತೋಟಗಂಟಿ ಎಂದು ಬಳಕೆಗೆ ಬಂದಿತು. ತೋಟ

– ನೀರಿರುವ ಪ್ರದೇಶ. ಗಂಟಿ – ದನಕರು, ಜಾನುವಾರು. ಅಂದರೆ ನೀರಿರುವ ಪ್ರದೇಶ ಹಾಗೂ ದನಕರುಗಳು ಬರುವ ಪ್ರದೇಶ ಇದಾಗಿದ್ದು ತೋಟಗಂಟಿ ಎಂದಾಗಿದೆ. ಈಗಲೂ ಈ ಪ್ರದೇಶದಲ್ಲಿ ಎಲೆ ಬಳ್ಳಿಯ ತೋಟಗಳಿರುವುದನ್ನು ಕಾಣಬಹುದು.

**ಎರಿಬ್ಯಾಲೇರಿ:**

ನರೆಯಂಗಲ್ ಹನ್ನೆರಡರಲ್ಲಿ ಬರುವ 'ಬೇಲೇರಿ' ವೇ ಇವತ್ತಿನ ಎರಿ ಬ್ಯಾಲೇರಿಯಾಗಿದೆ. ಕ್ರಿ.ಶ.1044 ರ 6ನೇ ವಿಕ್ರಮಾದಿತ್ಯನ ಕಾಲದ ಶಾಸನದಲ್ಲಿ "ಬೇಲೇರ ಜೋಗೇಶ್ವರದ........" ಎಂಬ ಉಲ್ಲೇಖವನ್ನು ಗಮನಿಸಿದಾಗ ಇದೊಂದು ಪ್ರಾಚೀನ ಗ್ರಾಮವಾಗಿದ್ದು, ಯರೆ ಅಥವಾ ಎರಿ ಅಂದರೆ ಕಪ್ಪು ಮಣ್ಣಿನ ಭೂಪ್ರದೇಶ ಮತ್ತು ಅನೇಕ ಗಿಡಗಂಟಿಗಳಿಂದ ಆದ ಬೇಲಿಗಳಿಂದ ಕೂಡಿ ಊರಾಗಿದ್ದು ಯರೆ ಬೇಲೇರಿ ಎಂದು ಸ್ಥಳನಾಮ ಬಂದಿದೆ. ಎರಿ ಎನ್ನುವ ಶಬ್ದ ನಿರ್ದಿಷ್ಟ ಮತ್ತು ವ್ಯಾವಹಾರಿಕದಲ್ಲಿಯೂ ಬಳಕೆಯಾಗಿರುವುದು ವಿಶೇಷವಾಗಿದೆ. ಈಗ ಎರಿಬ್ಯಾಲೇರಿ ಎಂದು ಕರೆಯುತ್ತಾರೆ.

**ಕಲ್ಲೂರು:**

ಇವತ್ತಿನ ಯಲಬುರ್ಗಾ ತಾಲೂಕಿನಲ್ಲಿ ಬರುವ ಕಲ್ಲೂರು ನರೆಯಂಗಲ್ ಹನ್ನೆರಡರಲ್ಲಿ ಬರುವ ಊರಾಗಿದೆ. ಈ ಊರಲ್ಲಿ ಕಲ್ಲಿನಾಥೇಶ್ವರ ದೇವಾಲಯವಿದ್ದು, ಆ ಕಲ್ಲಿನಾಥನ ಹೆಸರೇ ಈ ಊರಿಗೆ ಬಂದಿರಬಹುದು. ಕ್ರಿ.ಶ. 1186ರ ಶಾಸನದಲ್ಲಿ 'ಕಲ್ಲೂರು' ಎಂಬ ಉಲ್ಲೇಖವಿದೆ. ಪ್ರಾಚೀನ ಮತ್ತು ಅರ್ವಾಚೀನವಾಗಿ ಈ ಊರಿನ ಹೆಸರು ಯಾವುದೇ ರೀತಿಯ ಬದಲಾವಣೆಯಾಗಿರುವುದಿಲ್ಲ. ಇನ್ನೊಂದು ಅರ್ಥದಲ್ಲಿ ಕಲ್ಲು – ಕಲ್ಲು, ಊರು – ಗ್ರಾಮಕ್ಕಿಂತ ದೊಡ್ಡ ಪ್ರದೇಶ ಎಂದಾಗುತ್ತದೆ. ಭೌಗೋಳಿಕವಾಗಿ ಕಲ್ಲುಗಳನ್ನು ಹೊಂದಿದ ಪ್ರದೇಶವಾಗಿರುವದರಿಂದಲೂ ಕಲ್ಲೂರು ಎಂಬ ಸ್ಥಳನಾಮ ಬಂದಿರಬಹುದು.

**ಇಟಗಿ:**

ದೇವಾಲಯಗಳ ಚಕ್ರವರ್ತಿ ಎಂದು ಕರೆಯಲ್ಪಡುವ ಮಹಾದೇವ ದೇವಾಲಯವನ್ನು ಹೊಂದಿರುವ ಇವತ್ತಿನ ಯಲಬುರ್ಗಾ ತಾಲೂಕಿನ 'ಇಟಗಿ' – ಶಾಸನದಲ್ಲಿ ಇಟ್ಟಗಿ ಅಗ್ರಹಾರವಾಗಿ ಮೆರೆದಿತ್ತು. ಕ್ರಿ.ಶ. 1112ರ ಶಾಸನದಲ್ಲಿ 'ಮಹಾಗ್ರಹಾರವಿಟ್ಟಿಗೆಯೆಸೆಗುಂ' ಎಂದಿದೆ. ವಿಟ್ಟಿಗೆ > ಇಟ್ಟಿಗೆ > ಇಟ್ಟಿಗೆಯಾಗಿದೆ. ಆದರೆ ಈ ನರೆಯಂಗಲ್ ಹನ್ನೆರಡರಲ್ಲಿ ಬರುವ ಇನ್ನೊಂದು ಊರು ನಿಡಗುಂದಿ ಎಂದು ತಿಳಿದುಬರುತ್ತದೆ. ಆದರೆ ಶಾಸನಗಳನ್ನು ಅಧ್ಯಯನ ಮಾಡಿದಾಗ ಇನ್ನೂ ಸ್ಪಷ್ಟತೆ ಲಭ್ಯವಾಗದೆ ಇರುವದರಿಂದ ಆ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕಾಗಿದೆ.

| ಅ.ಕ್ರ.ಸಂ. | ಅರ್ವಾಚೀನ ಗ್ರಾಮ ನಾಮ | ಪ್ರಾಚೀನ ಗ್ರಾಮ ನಾಮ | ಗ್ರಾಮ ನಾಮವಿರುವ ಸಂಪುಟಗಳು |
|---|---|---|---|
| 01 | ನರೇಗಲ್ | ನರೆಯಂಗಲ್ | SII – Vol – XI, Part – II, ನಂ–119. ಕ್ರಿ.ಶ. 1114 |
| | | ನರೆಯಂಗಲ್ (ಅಗ್ರಹಾರ) | ಶಾ.ಸಂ–2, ಕೊ. ಜಿ ನಂ–17 ಕ್ರಿ.ಶ. 1125<br>SII – Vol – XI, Part – II, ನಂ–170. ಕ್ರಿ.ಶ. 1121<br>SII – Vol – XV, ನಂ–41 |

| | | | |
|---|---|---|---|
| 02 | ಕೋಟುಮುಚಗಿ (ಅಗ್ರಹಾರ) | ಉಮ್ಮಚ್ಚಿಗಿ, ಉಮಚಗೆ | SII – Vol – XVIII, ನಂ–143, ಕ್ರಿ.ಶ. 1112 |
| 03 | ಜಕ್ಕಲಿ (ಅಗ್ರಹಾರ) | ಜಕ್ಕಿಲಿ | SII – Vol – XI, Part – I, ನಂ–168. ಕ್ರಿ.ಶ. 1120 |
| 04 | ಅ ಬ್ಬಿ ಗೇ ೯ ರೆ (ಬ್ರಹ್ಮಪುರಿ) | ಅವ್ವಗೇರಿ, ಅಬ್ಬಯಗೇರೆ | SII – Vol – XV, ನಂ–68, ಕ್ರಿ.ಶ. 1168<br>SII – Vol – XV, ನಂ–244, ಕ್ರಿ.ಶ. 1379<br>SII – Vol – XI, Part – I, ನಂ–176. ಕ್ರಿ.ಶ. 1125 |
| 05 | ಹಾಲಕೇರಿ | ಹಾಳಕೇರಿ, ಹಾಗಲಕೇರಿ | SII – Vol – XV, ನಿಡಗುಂದಿ ನಂ–24, ಕ್ರಿ.ಶ. 1174<br>ಕೊ.ಜಿ.ಶಾ.ಕೋಶ–02 ಮುಧೋಳ ಕ್ರಿ.ಶ. 1154 ರ ಶಾಸನ |
| 06 | ತೋಟಗಂಟಿ (ಅಗ್ರಹಾರ) | ಎಲೆಯ ಪೂರ್ವಹಳ್ಳಿ | SII – Vol – XI, Part – I, ನಂ–163. ಶಾಸನದ 51ನೇ ಸಾಲು |
| 07 | ಎರಿಬ್ಯಾಲೇರಿ | ಬೇಲೇರಿ | SII – Vol – XI, Part – I, ನಂ–120. ಕ್ರಿ.ಶ. 1044 |
| 08 | ಕೋಡಿಕೊಪ್ಪ | –– | –– |
| 09 | ಇಟಗಿ | ಇಟ್ಟಗೆ | ಶಾ.ಸಂ–2, ಕೊ. ಜಿ ನಂ–67 ಕ್ರಿ.ಶ. 1112 |
| 10 | ಕಲ್ಲೂರು | ಕಲ್ಲೂರು | ಶಾ.ಸಂ–2, ಕೊ. ಜಿ ನಂ–12 ಕ್ರಿ.ಶ. 1186<br>ಶಾ.ಸಂ–2, ಕೊ. ಜಿ ನಂ–14 |
| 11 | ಕಿರಿನರೆಯಂಗಲ್ | –– | SII – Vol – XI, Part – I, ನಂ–170. ಕ್ರಿ.ಶ. 1121 |
| 12 | ನಿಡುಗುಂದಿ | –– | –– |

ಹೀಗೆ ನರೆಯಂಗಲ್ ಹನ್ನೆರಡರಲ್ಲಿ ಬರುವ ನರೇಗಲ್ಲ ನಗರವನ್ನೊಳಗೊಂಡು ಆ ಆಡಳಿತ ಪ್ರದೇಶದಲ್ಲಿ ಬರುವ ಹಳ್ಳಿಗಳ ಗ್ರಾಮನಾಮ, ಪದನಿಷ್ಪತ್ತಿ ಮತ್ತು ಸ್ಥಳನಾಮಗಳ ವಿವೇಚನೆಯನ್ನು ಮಾಡಲಾಗಿದೆ.

## ಆಕರ ಗ್ರಂಥಗಳು:


1. ಕೃಷ್ಣಮಾಚಾರ್ಲು ಸಿ. ಆರ್. ಮತ್ತು ಲಕ್ಷ್ಮೀನಾರಾಯಣರಾವ್ ಎನ್. (ಸಂಪಾದಕರು), (1940 ಮತ್ತು 1953), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ – ಸಂಪುಟ – XI (ಭಾಗ I ಮತ್ತು II), ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ASI).
2. ದೇಸಾಯಿ ಪಿ. ಬಿ. (ಸಂಪಾದಕರು), (1956), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ – ಸಂಪುಟ – XV, ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ASI).
3. ಲಕ್ಷ್ಮೀನಾರಾಯಣರಾವ್ ಎನ್. (ಸಂಪಾದಕರು), (1975), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ – ಸಂಪುಟ – XVIII, ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ASI).
4. ದೇವರಕೊಂಡಾರೆಡ್ಡಿ (ಪ್ರಧಾನ ಸಂಪಾದಕರು), (1998), ಶಾಸನ ಸಂಪುಟ : 02 ಕೊಪ್ಪಳ ಜಿಲ್ಲೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.


## ಪರಾಮರ್ಶನ ಗ್ರಂಥಗಳು:


1. ಸುರೇಶ ಕೆ. ಎಂ. ಮತ್ತು ವಾಸುದೇವ ಬಡಿಗೇರ, (2000), ಕರ್ನಾಟಕ ದೇವಾಲಯ ಕೋಶ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಬಾಲಸುಬ್ರಮಣ್ಯ, (2011), ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಸುಜಾತಾ ಬರದೂರ, (2008), ಗದಗ ಜಿಲ್ಲೆಯ ಸ್ಥಳನಾಮಗಳು, ಗದಗ.
4. ನರೇಗಲ್ ಎಂ. ಎಸ್., (2009), ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ, ಗದಗ: ರವಿರಶ್ಮಿ ಪ್ರಕಾಶನ.
5. ಚನ್ನಬಸವಯ್ಯ ಹಿರೇಮಠ, (2014), ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.